

**ಬಳ್ಳಾರಿ ಹಾಗೂ ಬಿಸಿಲು ಪರ್ಯಾಯ ಪದಗಳು. ಮೈಮನಗಳ ಉತ್ಸಾಹವನ್ನೆಲ್ಲ ಕಸಿದುಕೊಳ್ಳುವಷ್ಟು ತೀವ್ರವಾದ ಬಿಸಿಲಿನ ಬಗ್ಗೆ ಬಳ್ಳಾರಿ ಪರಿಸರದಲ್ಲಿ ಸಾಕಷ್ಟು ಕಥೆಗಳೇ ಇವೆ. 'ಬಳ್ಳಾರಿಯಲ್ಲಿರುವುದು ಎರಡೇ ಕಾಲ, ಒಂದು ಬೇಸಿಗೆ ಮತ್ತು ಬಿರು ಬೇಸಿಗೆ ಕಾಲ' ಎಂಬ ಬೀಚಿಯವರ ಮಾತು ಇಲ್ಲಿನ ಜನರ ನಾಲಿಗೆ ಮೇಲೆ ಅದೆಷ್ಟು ಬಾರಿ ಬಂದಾಡಿದರೂ ಸವೆಯುವುದಿಲ್ಲ.**

ಫ್ಯಾನು, ಕೂಲರುಗಳಿಲ್ಲದವರ ಮನೆಯಲ್ಲಿ ಬೀಸಣಿಗೆ ಗಾಳಿಯೇ ಎಂದು ಕೇಳುವಂತಿಲ್ಲ. ಎಂಥ ಬಡವರ ಮನೆಯಲ್ಲೂ ಚಿಕ್ಕದೊಂದು ಟೇಬಲ್ ಫ್ಯಾನು, ಕೂಲರು ಇದ್ದೇ ಇರುತ್ತದೆ. ಬೇಸಿಗೆಯಲ್ಲೇ ಕೆಡುವ ಈ ಸಂಗಾತಿಗಳನ್ನು ಹೊತ್ತು ಅಂಗಡಿಗಳಿಗೆ ಅಲೆಯುವವರ ನೆರಳು ಬಿಸಿಲಿನಲ್ಲಿ ಉದ್ದವಾಗಿಯೇ ಇರುತ್ತದೆ. ಇಂಥ ಬಿಸಿಲ ದಿನಗಳಲ್ಲೇ ಮನೆ ಮಂದಿ ಎಲ್ಲರೂ ಇಡೀ ವರ್ಷಕ್ಕೆ ಬಳಸಲು ಆಗುವಷ್ಟು ಸಂಡಿಗೆ, ಶಾವಿಗೆ, ಚಕ್ಕುಲಿ, ಮಜ್ಜಿಗೆ ಮೆಣಸಿನಕಾಯಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವರು. ಈ ಬಿಸಿಲಿನಲ್ಲೇ ಅವು ಒಣಗಿ ಮಾಗಬೇಕು, ಇಲ್ಲವಾದರೆ ರುಚಿ ಕೆಟ್ಟು ಹಾಳಾಗುತ್ತವೆ!

***

'ಈ ಸುಡುಹಬೆಗೆ ಸೊಳ್ಳೆಗಳು ಅದೆಲ್ಲಿ ಹೋಗಿ ಸತ್ತವೋ, ಪರದೆಯನ್ನು ಇನ್ನು ಕಟ್ಟೋದು ಬೇಡ' ಎಂದು ಹೆಂಡತಿ ಹೇಳಿದಾಗ ಆಶ್ಚರ್ಯವಾಯಿತು. ಬೇಸಿಗೆಯು ಕೇವಲ ಮನುಷ್ಯರನ್ನಷ್ಟೇ ಬಾಧಿಸುತ್ತಿಲ್ಲ. ಈ ಭೂಮಿಯ ಮೇಲೆ ಉಸಿರಾಡುತ್ತಿರುವ ಕ್ರಿಮಿಕೀಟಾದಿಗಳೆಲ್ಲ ಜೀವಿಗಳನ್ನೂ ಬಾಧಿಸುತ್ತಿದೆ ಎಂಬ ಬಿಸಿ ಸತ್ಯವೂ ಚುರುಕು ಮುಟ್ಟಿಸಿತು. ಮನುಷ್ಯ ಕೇಂದ್ರಿತವಾಗಿಯೇ ಬೇಸಿಗೆಯನ್ನು ನೋಡಬಾರದು.

'ಬಳ್ಳಾರಿಯಲ್ಲಿರುವುದು ಎರಡೇ ಕಾಲ, ಒಂದು ಬೇಸಿಗೆ ಮತ್ತು ಬಿರು ಬೇಸಿಗೆ ಕಾಲ' ಎಂಬ ಬೀಚಿಯವರ ಮಾತು ಇಲ್ಲಿನ ಜನರ ನಾಲಿಗೆ ಮೇಲೆ ಅದೆಷ್ಟು ಬಾರಿ ಬಂದಾಡಿದರೂ ಸವೆಯುವುದಿಲ್ಲ.

ಬೇಸಿಗೆ ಮತ್ತು ಬಿರುಬೇಸಿಗೆ ಕಾಲದ ನಡುವೆ ಮಳೆಗಾಲ ಮತ್ತು ಚಳಿಗಾಲಗಳು ಮುದುಡಿ ಕೊಂಡಿರುವುದೇ ಕೆಲಸ ಎನ್ನುವಂತಿಲ್ಲ. ಮಳೆಗಾಲ ದಲ್ಲಿ ಮಳೆ, ಚಳಿಗಾಲದಲ್ಲಿ ಚಳಿ ತಮ್ಮ ಕರಾಮತ್ತು ತೋರಿಸಲು ಹವಣಿಸುತ್ತಲೇ ಇರುತ್ತವೆ. ಬಿಸಿಲು ಇವೆರಡನ್ನೂ ಬ್ರಹ್ಮರಾಕ್ಷಸನಂತೆ ನುಂಗಲು ಸದಾ ಬಾಯಿ ತೆರೆದಿರುತ್ತದೆ. 'ಈ ಹಾಳ್ ಶನಿ ಸೂಳೇಮಗಂದ್ ಮಳೆ ಅದ್ಯಾಕ್ ಹಿಂಗ್ ಬಂದ್ ಆಡ್ತದೋ. ಆ ಬಿಸಿಲನ್ನಾದ್ರೂ ಎಂಗೋ ತಟ್ಕಂಬೋದು' ಎಂಬ ಮಾತನ್ನೂ ನಗರದ ಜನರ ಬಾಯಲ್ಲಿ ಆಡಿಸುತ್ತದೆ. ಅದು ಎರಡು ದಿನದ ಜಡಿಮಳೆಗೆ ಜನರ ಪ್ರತಿಕ್ರಿಯೆ. ಆದರೆ ಹಳ್ಳಿಗಳಲ್ಲಿ ಒಣಗಿದ, ಒಣಗುತ್ತಿರುವ ಬೆಳೆಗಳ ಮುಂದೆ ನಿಂತ ಬತ್ತಿದ ಕಣ್ಣುಗಳ ರೈತರ ಸಂಕಟವೇ ಬೇರೆ. 'ಎಲ್ಲಿ ಓಡುವಿರಿ ನಿಲ್ಲಿ ಮೋಡಗಳೇ ನಾಲ್ಕು ಹನಿಯ ಚೆಲ್ಲಿ' ಎಂಬ, ನಗರಜೀವಿಯಾದ ಕವಿಯ ಸಾಲು ಇಲ್ಲಿ ದಯನೀಯ ಪ್ರಾರ್ಥನೆಯಾಗುತ್ತದೆ.

ಬೆಳಿಗ್ಗೆಯೇ ಮೂಡುವ ಮಧ್ಯಾಹ್ನದ ಉರಿಬಿಸಿಲು ಮೋಡಗಳನ್ನು ನಾಪತ್ತೆ ಮಾಡುತ್ತದೆ. ಮೋಡಗಳಿಗೆ ಜಾಗವಿಲ್ಲದ ನೀಲಿ ಆಕಾಶ ಬರಗಾಲಕ್ಕೆ ಕನ್ನಡಿ ಹಿಡಿಯುತ್ತದೆ. ಬಳ್ಳಾರಿಯ ಜನರು ಹೀಗೆ ಬಿಸಿಲೆಂಬ ಬ್ರಹ್ಮ ರಾಕ್ಷಸನ ಆಪ್ತಮಿತ್ರರು. ಹೀಗಾಗಿ ಕೆ.ಎಸ್. ನರಸಿಂಹಸ್ವಾಮಿಯವರ 'ಇಕ್ಕಳ' ಪದ್ಯದಲ್ಲಿ ಬರುವ ಸಾಲು 'ಬಂತಲ್ಲ ಬೇಸಿಗೆ, ಕೆಟ್ಟ ಬಿಸಿಲ್ ಎಂದರು' ಎನ್ನುವ ಜನ ಇಲ್ಲಿ ಇಲ್ಲ. ಕೆಟ್ಟ ಬಿಸಿಲು, ಒಳ್ಳೆಯ ಬಿಸಿಲು ಎಂಬುದೇನೂ ಇಲ್ಲಿ ಇಲ್ಲ. ಇರುವುದೆಲ್ಲ ಬರೀ ಬಿಸಿಲು.

### ಬಳ್ಳಾರಿಯಂತೆಯೇ ಬೆಂಗಳೂರು

'ಈಗ ಬೆಂಗಳೂರು ಕೂಡ ಬಳ್ಳಾರಿ ಯಂತೆಯೇ ಆಗಿಬಿಟ್ಟಿದೆ. ಉಷ್ಣಾಂಶ 36 ಡಿಗ್ರಿಗೇರಿದೆ. ನಿಮ್ಮ ಬಿಸಿಲೇನು ಮಹಾ' ಎಂದು ಅಲ್ಲಿನ ಸಹೋದ್ಯೋಗಿಗಳು ಹೇಳುವ ಮುಂಚೆಯೇ, ಕಲಬುರ್ಗಿಯ ಗೆಳೆಯರು 'ನಮ್ಮೂರಿಗೆ ಬಂದು ನೋಡು ಮಗನೇ. ಬಳ್ಳಾರಿ ಬಿಸಿಲನ್ನು ಆದರ ಕಾಲ ಕೆಳಗೆ ತೂರಿಸಬೇಕು' ಎಂದು ಸವಾಲು ಹಾಕುತ್ತಾರೆ.

ಈ ನಡುವೆಯೇ, ಬಿಸಿಲು–ಬೇಸಿಗೆ ಊರಿನಿಂದ ಊರಿಗೆ ಹೆಚ್ಚು–ಕಮ್ಮಿ ಆಗಿರುತ್ತದೆ ಎಂಬ ನಂಬಿಕೆಯೂ ಹುಸಿ ಯಾಗುತ್ತಿದೆ. ಎಲ್ಲರೂ 'ನಿಮ್ಮೂರಿಗಿಂತ ನಮ್ಮೂರಿನ ಬಿಸಿಲೇ ಜೋರು' ಎಂದು ಹೇಳುವಲ್ಲಿ ಉತ್ಸಾಹವೂ ಬೇಸರವೂ ಬೆರಕೆ ಯಾಗಿರುತ್ತದೆ. 'ಜಾಗತಿಕ ತಾಪಮಾನ' ಎಂಬ ಪದ ಎಲ್ಲೆಡೆ ಸಮಾನಾರ್ಥದಲ್ಲಿ ಬಳಕೆಯಾಗುತ್ತಿದೆ ಎಂದರೆ ವಿರೋಧಿಸುವವರು ಯಾರು?

### ಕೊಡಗಳು ಸಾರ್!

ವರದಿಗಾರರೊಬ್ಬರು ಹಳ್ಳಿಯೊಂದರ ನೀರಿನ ಸಮಸ್ಯೆ ಕುರಿತು ಬರೆದಿದ್ದ ವರದಿಗೆ 'ತಾರಕ್ಕ ಬಿಂದಿಗೆ ಹೋಗೋಣ ನೀರೀಗೆ' ಎಂಬ ಶೀರ್ಷಿಕೆ ಕೊಟ್ಟಿದ್ದನ್ನು ಕಂಡು ಪ್ರಶ್ನೆಯೊಂದು ಎದ್ದಿತು.

ಆ ಬಗೆಯ ನಿರಾಳ ಮನಸ್ಥಿತಿಯಲ್ಲಿ ಹಳ್ಳಿಯ ಮಹಿಳೆಯರು ನೀರು ತರಲು ಹೊರಡುವ ಪರಿಸ್ಥಿತಿ ಇದೆಯೇ? ಖಂಡಿತಾ ಇಲ್ಲ. ಆದರೆ ಬರಿಗೊಡಗಳಿಗೆ ಸಮಾಧಾನ ಹೇಳಲಾಗದ ನೀರಿಲ್ಲದ ನಲ್ಲಿಗಳು, ಬೋರ್‌ವೆಲ್‌ಗಳು, ಕೆರೆ ಕುಂಟೆ ಹಳ್ಳ ಬಾವಿ ಗಳಿಗೂ ಸಮಾಧಾನ ಹೇಳುವವರಿಲ್ಲ. ಎಲ್ಲರೂ ಪಡೆದುಕೊಳ್ಳುವವರೇ. ಕೊಡುವವರು ಯಾರೂ ಇಲ್ಲ.

ಎರಡು ವರ್ಷ ಮಳೆ ಸರಿಯಾಗಿ ಬಾರದೇ ತುಂಗಭದ್ರಾ ಜಲಾಶಯ ತುಂಬದ ಕಾರಣ. ನೀರಿಗೆ ತತ್ವಾರ. ಜೊತೆಗೆ ಸುಡುವ ಬೇಸಿಗೆ. ತುಂಗಭದ್ರೆ, ಹಗರಿ ನದಿಯ ಒರತೆಯನ್ನು ಹುಡುಕುತ್ತಾ ಹೊರಡುವ ಮಹಿಳೆಯರ ಹಾಡು ಯಾವುದು? ಡಿಸೆಂಬರಿನಲ್ಲೇ ಕಾಲುವೆಗಳಲ್ಲಿ ನೀರು ಬರಿದಾಗಿ ಎರಡನೇ ಬೆಳೆಗೆ ಗತಿಯೇ ಇಲ್ಲದ ರೈತರ ಬೇಸಿಗೆಯ ಹಾಡು ಯಾವುದು?

ಇಂಥ ಪ್ರಶ್ನೆಗಳ ಹಂಗಿಲ್ಲದೆ ಹಳ್ಳಿ ಹೆಂಗಸರು ಹೆಗಲ ಮೇಲಿನ ಕೋಲಿನ ಎರಡೂ ತುದಿಗೆ ನೂರಾರು ಹೊಸ ಬಿಂದಿಗೆಗಳನ್ನು ತೂಗುಬಿಟ್ಟು ನಗರದೆಡೆಗೆ ನಡೆಯುತ್ತಾರೆ. ಅತಿಯಾಗಿ ಸವೆದು ಪೇಪರಿನಂತಾದ ಚಪ್ಪಲಿ ಹಾಕಿದ ಅವರ ಕಾಲಿಗೆ ಬಿಸಿಲು ತಾಗುವುದಿಲ್ಲವೇ? ಎಂದು ಕೊಳ್ಳುತ್ತಿರುವಾಗಲೇ, ಹಿತ್ತಾಳೆ ಗಂಟೆ ಬಾರಿಸುತ್ತಾ ಐಸ್‌ಕ್ರೀಂ ಗಾಡಿಯವನು ಮನೆ ಮುಂದೆ ಬರುತ್ತಾನೆ. ಅವನ ತಲೆ ಮೇಲೆ ಟೋಪಿಯೂ ಇಲ್ಲ. ಕಣ್ಣಿಗೆ ಕೂಲಿಂಗ್ ಗ್ಲಾಸೂ ಇಲ್ಲ. ಛತ್ರಿ ಹಿಡಿಯುವಷ್ಟು ಕೈ ಖಾಲಿ ಇಲ್ಲ.

### ಅವರವರ ಬೇಸಿಗೆ...

ಒಳ್ಳೆಯ ಹವಾಮಾನಕ್ಕಾಗಿ ಎದುರು ನೋಡುವ ರೈತರನ್ನು ಹೊರತುಪಡಿಸಿದರೆ, ಪ್ರತಿಯೊಬ್ಬರೂ ತಮ್ಮದೇ ಆದ ಬೇಸಿಗೆಯನ್ನು ರೂಪಿಸಿಕೊಳ್ಳುತ್ತಾರೆ. ಯಾವ ಕಾಲಕ್ಕೂ ತನ್ನದೇ ಆದ ಗುಣಧರ್ಮವಿರುವುದಿಲ್ಲ. ಅದನ್ನು ಹೀಗೂ ಹೇಳಬಹುದು: ಉಳ್ಳವರಿಗೊಂದು ಬೇಸಿಗೆ, ಇಲ್ಲದವರಿಗೊಂದು ಬೇಸಿಗೆ.

ಧಾರವಾಡದಲ್ಲಿ ನಿಂತು 'ಬೆಳಗು' ಕವಿತೆ ಬರೆದ ಬೇಂದ್ರೆ ಎಂದಾದರೂ ಒಮ್ಮೆ ಬಳ್ಳಾರಿಗೆ ಬಂದಿದ್ದರೆ, 'ಇದು ಬರಿ ಬೆಳಗಲ್ಲೋ ಅಣ್ಣಾ' ಎಂದಂತೆಯೇ, 'ಇದು ಬರಿ ಬಿಸಿಲಲ್ಲೋ ಅಣ್ಣಾ' ಎಂದು ಬಿಸಿಲಿನ ಸಾಮಾಜಿಕತೆಗೂ ಅಧ್ಯಾತ್ಮಕ್ಕೂ ಕಾವ್ಯದ ಬಟ್ಟೆಯನ್ನು ತೊಡಿಸುತ್ತಿದ್ದರೇನೋ.

ಸ್ಕಿನ್ ಟ್ಯಾನ್ ಆಗುವ ಭಯದಿಂದ, ಬರಿ ಕಣ್ಣಷ್ಟೇ ಕಾಣಿಸುವಂತೆ ಮುಖ, ಕತ್ತಿನ ಸುತ್ತ ಸ್ಕಾರ್ಫ್ ಸುತ್ತಿಕೊಂಡ ಹುಡುಗಿಯರ ಮುಖದ ಅಂದವನ್ನು ಲೆಕ್ಕ ಹಾಕುತ್ತಾ ಅವರೊಂದಿಗೆ ಮಾತಿಗೆ ನಿಲ್ಲುವ ಹುಡುಗರ ಕಪ್ಪು ಕನ್ನಡಕದೊಳಗೆ ಬೇಸಿಗೆ ಅಡಗಿ ಕುಳಿತಿದೆ.

ಬೆಚ್ಚನೆಯ ಪ್ರೇಮಕ್ಕೆ ಇಲ್ಲಿ ಜಾಗವಿಲ್ಲ. ಏನಿದ್ದರೂ ಬೆವರುವ ಪ್ರೇಮ. ಸದಾ ಕೊನರುವ ಕೊನೆ ಇರದ ಪ್ರೇಮ. ಸದಾ ಬೆವರುವ ಕೊನೆ ಇರದ ಬೇಸಿಗೆ. ■